268

## ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **310**
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 15-02-2024

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಕ್ರಾಂತಿ ಕನ್ನಡ ದಿನಪತ್ರಿಕೆಯು ಅವ್ಯವಹಾರ ಮಾಡಿ ಇಲಾಖೆಯ ಕಾನೂನನ್ನು ಗಾಳಿಗೆ ತೂರಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಕ್ರಾಂತಿ ಕನ್ನಡ ದಿನಪತ್ರಿಕೆಯು ದಿನಾಂಕ: 30-10-2021 ಹಾಗೂ ದಿನಾಂಕ:26-03-2022 ರಂದು ಎರಡು ಪ್ರತ್ಯೇಕ ಪತ್ರಿಕೆಗಳನ್ನು ಪ್ರಕಟಿಸಿರುವ ವಿಷಯವು ಇಲಾಖೆಯ ಗಮನಕ್ಕೆ ಬಂದಿರುತ್ತದೆ. |
| (ಆ) | ಈ ಪತ್ರಿಕೆಯಲ್ಲಿ ಸರ್ಕಾರದ ಜಾಹೀರಾತನ್ನು ಒಂದೇ ದಿನದ ಎರಡು ಪತ್ರಿಕೆಯಲ್ಲಿ ಮುದ್ರಿಸಿ ಒಂದರಲ್ಲಿ ಜಾಹೀರಾತು ಇನ್ನೊಂದರಲ್ಲಿ ಜಾಹೀರಾತು ಹಾಕದೆ ಮುದ್ರಿಸಿ ಕಾನೂನು ಉಲ್ಲಂಘನೆ ಮಾಡಿ ಸರ್ಕಾರ ಹಾಗೂ ಸಾರ್ವಜನಿಕರಿಗೆ ದ್ರೋಹ ಮಾಡಿದ್ದು ಇಲಾಖೆಯ ಗಮನಕ್ಕೆ ತಂದರೂ ಸಹ ಆ ಪತ್ರಿಕೆ ವಿರುದ್ಧ ಕ್ರಮ ಕೈಗೊಳ್ಳದಿರಲು ಕಾರಣವೇನು; | ಬೀದರ್ ಕ್ರಾಂತಿ, ಕನ್ನಡ ದಿನಪತ್ರಿಕೆಯು ದಿನಾಂಕ: 30-10-2021 ಹಾಗೂ ದಿನಾಂಕ:26-03-2022 ರಂದು ಪ್ರತ್ಯೇಕವಾಗಿ ಒಂದೇ ದಿನ ಎರಡು ಬಾರಿ ಪತ್ರಿಕೆ ಮುದ್ರಿಸಿರುವುದು ಇಲಾಖೆಯ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, ಸರ್ಕಾರದಿಂದ ಸದರಿ ಪತ್ರಿಕೆಗೆ ನೀಡಲಾಗುವ ಎಲ್ಲಾ ಜಾಹೀರಾತುಗಳನ್ನು ತಡೆಹಿಡಿಯಲಾಗಿದೆ. ಈ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ವರದಿ ನೀಡುವಂತೆ ಸಂಬಂಧಿಸಿದ ಕ್ಷೇತ್ರ ಅಧಿಕಾರಿಯವರಿಗೆ ಸೂಚಿಸಲಾಗಿದೆ. ಮುಂದುವರೆದು ಬೀದರ್ ಕ್ರಾಂತಿ, ಕನ್ನಡ ದಿನ ಪತ್ರಿಕೆ ಇವರು ಒಂದೇ ದಿನ ಎರಡು ಪ್ರತಿಗಳನ್ನು ಮುದ್ರಿಸಿರುವುದರಿಂದ ಹಾಗೂ ಟೆಂಡರ್ ಜಾಹೀರಾತುಗಳನ್ನು ಇಲಾಖೆಯ ಗಮನಕ್ಕೆ ತರದೇ ನೇರವಾಗಿ ಸರ್ಕಾರಿ ಕಚೇರಿಗಳಿಂದ ಪಡೆದು ಪತ್ರಿಕೆಯಲ್ಲಿ ಪ್ರಕಟಮಾಡುತ್ತಿದ್ದ ಹಿನ್ನೆಲೆಯಲ್ಲಿ ಬೀದರ್ ಕ್ರಾಂತಿ, ಕನ್ನಡ ದಿನ ಪತ್ರಿಕೆಯನ್ನು ಇಲಾಖೆಯ ಮಾಧ್ಯಮ ಪಟ್ಟಿಯಿಂದ ಅಮಾನತ್ತಿನಲ್ಲಿ ಇಡಲಾಗಿದೆ. |
| (ಇ) | ಈ ಕುರಿತು ವಾರ್ತಾ ಅಧಿಕಾರಿಯ ಮೇಲೆ ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ವರದಿ ಸಲ್ಲಿಸಿರುವುದಾಗಿ ತಪ್ಪು ಮಾಹಿತಿ ನೀಡಿ, ಸರ್ಕಾರಕ್ಕೆ ದ್ರೋಹ ಮಾಡುತ್ತಿರುವ ಅಂತಹ ಅಧಿಕಾರಿಯ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ? | ಅನ್ವಯಿಸುವುದಿಲ್ಲ. |

**ಸಂ. ಕೆಸಿಐ/54/ಪಿಐಪಿ/2024**

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿ**